ಉತ್ತರಹಳ್ಳಿ ಕ್ಷೇತ್ರದ ಈಜೀಪುರದಲ್ಲಿ ನಾಗರೀಕ ಸೌಲಭ್ಯಗಳ ಕೊರತೆ.

2987(3800)

ಶ್ರೀ ಆರ್.ಅಶೋಕ್(ಉತ್ತರಹಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಉತ್ತರಹಳ್ಳಿ ಕ್ಷೇತ್ರದ ಈಜಿಪುರದಲ್ಲಿ ಯಾವುದೇ (ಸಿವಿಕ್ ಅಮೇನಿಟೀಸ್) ನಾಗರೀಕ ಸೌಲಭ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರದೇಶದಲ್ಲಿ ಅಂಚೆ ಕಛೇರಿ, ವಿದ್ಯುಚ್ಛಕ್ತಿ ಮಹಾನಗರ ಪಾಲಿಕೆ ಕಛೇರಿ ತೋಟಗಾರಿಕೆಯ ತರಕಾರಿ ಮಾರಾಟ ಮಳಿಗೆ, ಕಸದ ತೊಟ್ಟಿಗಳು ಇತ್ಯಾದಿಗಳ ವ್ಯವಸ್ಥೆಗಾಗಿ ಸರ್ಕಾರ ಸೂಕ್ತ ಸ್ಥಳ ವಶಪಡಿಸಿಕೊಂಡು ಈ ನಾಗರೀಕ ಸೌಲಭ್ಯಗಳನ್ನು ಒದಗಿಸಲು ವ್ಯವಸ್ಥೆ ಮಾಡುವುದೇ?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು):

ಅ) ಹೌದು.

ಆ) ಈಜಿಪುರ ಪ್ರದೇಶವು ರೆವಿನ್ಯೂ ಬಡಾವಣೆಯಾಗಿದ್ದು 1995ರಲ್ಲಿ ನಗರ ಪಾಲಿಕೆಯ ವ್ಯಾಪ್ತಿಗೆ ಸೇರಿರುತ್ತದೆ. ಎಲ್ಲಾ ನಾಗರೀಕ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರಿನ ಈಜಿಪುರ ರಾಷ್ಟ್ರೀಯ ಕ್ರೀಡಾ ಗ್ರಾಮದ ಹಿಂಬದಿಯಲ್ಲಿ ದೊಡ್ಡಮೋರಿಗೆ ತಡೆಗೋಡೆ ನಿರ್ಮಾಣ.

2988(3801)

ಶ್ರೀ ಆರ್.ಅಶೋಕ್(ಉತ್ತರಹಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಈಜಿಪುರದ ರಾಷ್ಟ್ರೀಯ ಕ್ರೀಡಾ ಗ್ರಾಮದ ಹಿಂಬದಿಯಲ್ಲಿ ದೊಡ್ಡ ಮೋರಿಗೆ ತಡೆಗೋಡೆ ಕಟ್ಟಲು ನಿರ್ಧಾರವಾಗಿದೆಯೇ? ಹಾಗಿದ್ದಲ್ಲಿ ಈಗ ಯಾವ ಹಂತದಲ್ಲಿದೆ?

ಅ) ತಡೆಗೋಡೆ ನಿರ್ಮಾಣಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು?

ಇ) ನಿರ್ಮಾಣ ಕಾರ್ಯ ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು):

ಅ) ಬೆಂಗಳೂರು ನಗರದ ಎಲ್ಲಾ ಮಳೆ ನೀರಿನ ದೊಡ್ಡ ಚರಂಡಿ ಹಾಗೂ ಉಪಚರಂಡಿಗಳ ಅಭಿವೃದ್ಧಿ ಕಾಮಗಾರಿಗೆ ಸಲಹೆಗಾರರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ನಡೆದಿದೆ. ಈ ಯೋಜನೆಯಲ್ಲಿ ಕೋರಮಂಗಲ ಕಣಿವೆಯೂ ಸೇರಿದ್ದು, ಈ ಕಣಿವೆಯಲ್ಲಿ ಈಜಿಪುರ ಚರಂಡಿಯು ಸಹ ಸೇರಿದೆ. ಸಲಹೆಗಾರರು ವರದಿ ನೀಡಿದ ನಂತರ ತಡೆಗೋಡೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಸಲಹೆಗಾರರು ವರದಿ ನೀಡಿದ ನಂತರ ಅಂದಾಜನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಬೆಂಗಳೂರು ಮಳೆನೀರಿನ ಚರಂಡಿಗಳ ಪುನರ್-ನಿರ್ಮಾಣ ಕಾರ್ಯದಲ್ಲಿ ಕೋರಮಂಗಲ ಕಣಿವೆಗೆ ಆದ್ಯತೆ ನೀಡಿ ಕನ್ಸಲ್‌ಟೆಂಟ್ ರವರು ನೀಡುವ ಸಲಹೆ ಮೇರೆಗೆ ಕಾಮಗಾರಿಯನ್ನು ಕೂಡಲೆ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರಿನ ಈಜೀಪುರದ ಮೋರಿ ಸ್ಥಳವನ್ನು ಅನಧಿಕೃತವಾಗಿ ಅಕ್ರಮ ಮಾಡಿಕೊಂಡಿರುವುದು.

2989(3802)

ಶ್ರೀ ಆರ್.ಅಶೋಕ್(ಉತ್ತರಹಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ರಾಷ್ಟ್ರೀಯ ಕ್ರೀಡಾ ಗ್ರಾಮದ ಹಿಂಬದಿಯಲ್ಲಿ ಈಜಿಪುರದ ದೊಡ್ಡ ಮೋರಿ ಅಕ್ರಮವಾಗಿ ಒತ್ತುವರಿಯಾಗಿರುವುದಕ್ಕೆ ದಾಖಲೆಗಳಿವೆಯೇ?

ಆ) ಹಾಗಿದ್ದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಪ್ರದೇಶ ಒತ್ತುವರಿಯಾಗಿದೆ? (ಏವರ ನೀಡುವುದು)

ಇ) ಇದುವರೆಗೂ ದಾಖಲೆಯಾಗದಿದ್ದಲ್ಲಿ ಮೋರಿ ಸ್ಥಳವನ್ನು ಅಕ್ರಮವಾಗಿ ಒತ್ತುವರಿ ಮಾಡಿರುವವರನ್ನು ಕೂಡಲೆ ಪತ್ತೆ ಹಚ್ಚಿ ಅವರಿಂದ ಅಕ್ರಮ ಒತ್ತುವರಿ